O.S. No.33/2014
DW. - 1

**ದಿನಾಂಕಃ 24-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಎಸ್.ಎಮ್.ಪಿ. ವಕೀಲರಿಂದ ವಾದಿ ಪರವಾಗಿಃ-**

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತಾರೆ. ಮುಂದುವರೆದ ನಿಶಾನೆಗಳನ್ನು ಗುರುತಿಸಿಲ್ಲ.

**ಪಾಟೀ ಸವಾಲುಃ** ವಾದಿ ಗೈರು, ವಾದಿಯ ಪರ ವಕೀಲರು ಹಾಜರಿಲ್ಲ. ಅದ್ದರಿಂದ ಇದು 10 ವರ್ಷ ಮೇಲ್ಪಟ್ಟ ಹಳೆಯ ಪ್ರಕರಣವಿದ್ದು ವಾದಿಗೆ ಸಮಯವಾಕಾಶಕ್ಕಾಗಿ ಮುಂದೂಡಲು ಸಾಧ್ಯವಿಲ್ಲ. ವಾದಿಯು ಇರುವ ಅವಕಾಶ ಬಳಸಿಕೊಂಡಿಲ್ಲ. ಅದ್ದರಿಂದ ವಾದಿ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ.

**ಪಾಟೀ ಸವಾಲುಃ** 2 ನೇ ಪ್ರತಿವಾದಿ ಪರ ಶ್ರೀ ಸಿ.ಕೆ.ಆರ್. ವಕೀಲರಿಂದ.

ಈ ದಾವೆಯನ್ನು ಸಲ್ಲಿಸುವಾಗ ನಾನು ಅಪ್ರಾಪ್ತನಾಗಿದ್ದೆ ಎಂದರೆ ಸರಿಯಲ್ಲ. ನನ್ನ ಇಂದಿನ ಮುಂದುವರೆದ ಮುಖ್ಯ ವಿಚಾರಣೆ ಪ್ರಮಾಣ ಪತ್ರಿಕೆಯಲ್ಲಿ ನನ್ನ ವಯಸ್ಸು 36 ವರ್ಷ ಎಂದು ಬರೆದಿದೆ ಎಂದರೆ ಸರಿ. ದಾವ ಆಸ್ತಿಗಳು ಖರೀದಿಯಾದಾಗ ನಾನು ಅಪ್ರಾಪ್ತ ಎಂದರೆ ಸರಿ. ಮೂಲ 1 ನೇ ಪ್ರತಿವಾದಿಯು ನನ್ನ ತಂದೆಯು ಅವರ ಕುಟುಂಬದಲ್ಲಿ ಹಿರಿಯ ಮಗ ಎಂದರೆ ಸರಿ. ಸಿದಪ್ಪ ಎಂಬುವರು ನನ್ನ ತಂದೆಯ ತಂದೆ ಅಜ್ಜ ಹೌದು ಮತ್ತು ಇವರು ಕುಟುಂಬದ ಖರ್ತ ಎಂದರೆ ಸರಿ. ನನ್ನ ತಂದೆ ಕುಟುಂಬದ ಹಿರಿಯ ಮಗನಾಗಿ ದಾವ ಆಸ್ತಿಗಳನ್ನು ನಿರ್ವಹಿಸುತ್ತಿದ್ದರು ಎಂದರೆ ಸರಿ. ದಿನಾಂಕ 04-12-2018 ರಲ್ಲಿ ಸಲ್ಲಿಸಿದ್ದ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯ ಖಂಡಿಕೆ 5 ರಿಂದ 7 ರಲ್ಲಿ ತೋರಿಸಿರುವ ಜಮೀನುಗಳನ್ನು ನನ್ನ ತಂದೆಯು ನನ್ನ ಅಜ್ಜನ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದಿರುವಲ್ಲಿ ನನ್ನ ತಂದೆಯು ಕ್ರಯದ ಪ್ರತಿಫಲವನ್ನು ಪಾವತಿಸಿದ್ದ ಬಗ್ಗೆ

ದಾಖಲೆಯನ್ನು ಸಲ್ಲಿಸಿದ್ದೇನೆಯೇ ಸಾಕ್ಷಿಯು ಹೌದು ಎನ್ನುತ್ತಾರೆ. ಏನು ದಾಖಲೆ ಕೊಟ್ಟಿದ್ದೆ ಎಂದರೆ ಸಾಕ್ಷಿಯು ಯಾವುದೇ ದಾಖಲೆ ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ತಂದೆ ಆದಾಯ ತೆರಿಗೆ ಪಾವತಿದಾರ ಎಂದು ಹೇಳಿರುವಲ್ಲಿ ಆದಾಯ ತೆರಿಗೆಯ ಸಲ್ಲಿಕೆಯ ದಾಖಲೆಯಲ್ಲಿ ನನ್ನ ತಂದೆಯು ಪಾವತಿಸಿದ ಕ್ರಯದ ಪ್ರತಿಫಲವನ್ನು ನಮೂದಿಸಿ ತೋರಿಸಿದ್ದಾರೆಯೇ ಎಂದರೆ ಐಡಿಯ ಇಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ತಂದೆ 1990 ರಿಂದ ಆದಾಯ ತೆರಿಗೆ ಪಾವತಿದಾರ ಎಂದು ಬರೆಸಿದ್ದೇನೆ ಎಂದರೆ ಸರಿ. ಮೇಲ್ಕಂಡ ಖಂಡಿಗಳಲಿಯೇ ಹೇಳಿರುವ ಆ ಜಮೀನುಗಳು ನನ್ನ ತಂದೆಯೇ ಕ್ರಯದ ಪ್ರತಿಫಲಪಾವತಿಸಿ ಅಜ್ಜನ ಹೆಸರಿನಲ್ಲಿ ಖರೀದಿಸಿದ್ದು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ಕುಟುಂಬದ ಖರ್ತನಾಗಿ ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ ಸದರಿ ಜಮೀನುಗಳನ್ನು ಕರೀದಿಸಿದ್ದರು ಎಂದರೆ ಸರಿಯಲ್ಲ. ಮೇಲ್ಕಂಡಂತೆಯೇ ನನ್ನ ಮುಖ್ಯ ವಿಚಾರಣಾ ಪ್ರಮಾಣ ಷತ್ರಿಕೆಯ 8 ನೇ ಖಂಡಿಕೆಯಲ್ಲಿ ಗಬ್ಬೂರು ಗ್ರಾಮದ ಸರ್ವೆ ನಂಬರ್ 416/ಎ ರಲ್ಲಿ 7 ಎಕರೆ 11 ಗುಂಟೆ ಜಮೀನು ಮತ್ತು ಸರ್ವೆ ನಂಬರ್ 416/ಬಿ ರಲ್ಲಿ 6 ಎಕರೆ ಜಮೀನುಗಳು 1997 ರಲ್ಲಿ ನನ್ನ ತಂದೆಯ ಹೆಸರಿನಲ್ಲಿ ಖರೀದಿಸಿದ್ದರು ಎಂಬ ಬಗ್ಗೆ ಯಾವುದೇ ದಾಖಲೆ ಸಲ್ಲಿಸಲ್ಲ ಮತ್ತು ಆ ರೀತಿ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಕೊಟ್ಟಿದ್ದೇನೆ ಎನ್ನುತ್ತಾರೆ. ಏನು ದಾಖಲೆಗಳನ್ನು ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಐಡಿಯ ಇಲ್ಲ ಎನ್ನುತ್ತಾರೆ. ಆದಾಯ ತೆರಿಗೆ ದಾಖಲೆಯಲ್ಲಿ ನನ್ನ ತಂದೆ ಸದರಿ ಜಮೀನುಗಳನ್ನು ಖರೀದಿಸಿದ್ದರು ಎಂದು ತೋರಿಸಿದ್ದಾರೆಯೇ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಸದರಿ ಜಮೀನುಗಳು ನನ್ನ ತಂದೆಯ ಸ್ವಂತ ಗಳಿಕೆಯಿಂದ ಬಂದಿದ್ದು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ನನ್ನ ತಂದೆಯ ತಮ್ಮ. ನಿಡಿ-2 ಮತ್ತು 3 ರಲ್ಲಿ 2 ನೇ ಪ್ರತಿವಾದಿ ಪಕ್ಷಗಾರರಲ್ಲ ಎಂದರೆ ಸರಿ. ಅದೇ ರೀತಿ ನಿಡಿ-2 ಮತ್ತು 3 ರಲ್ಲಿ 3 ಮತ್ತು

4 ನೇ ಪ್ರತಿವಾದಿಯರು ರಾಜಿ ಸಂದಾನ ಮಾಡಿಕೊಂಡ ಬಗ್ಗೆ ಉಪ ವಿಭಾಗಾಧಿಕಾರಿಯವರು ವಿಚಾರಣೆ ನಡೆಸಿದ್ದ ಬಗ್ಗೆ ಮತ್ತು ಅದರ ಮೇಲೆ ಚರ್ಚಿಸಿದ್ದ ಬಗ್ಗೆ ಅಂಶಗಳು ಇಲ್ಲ ಎಂದರೆ ಸರಿ. ನಿಡಿ-2 ಮತ್ತು 3 ರಲ್ಲಿ ನನ್ನ ತಂದೆಯು ಜಮೀನುಗಳು ತನ್ನ ಸ್ವಂತ ಗಳಿಕೆಯ ಆಸ್ತಿಗಳು ಎಂದು ಅವುಗಳನ್ನು ಕಬಳಿಸಲು ಸುಳ್ಳು ಹೇಳಿದ್ದರು ಎಂದರೆ ಸರಿಯಲ್ಲ. ಇದೇ ಉದ್ದೇಶದಿಂದ ನನ್ನ ತಂದೆ 1 ನೇ ಪ್ರತಿವಾದಿಯು ಸುಳ್ಳು ಪ್ರತಿಹಕ್ಕನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಲಿಖಿತ ಹೇಳಿಕೆಯಲ್ಲಿ ಪ್ರತಿಪಾದಿಸಿದ್ದಂತೆ ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ಹಾಗೂ ಸಹೋದರಿಯರ ನಡುವೆ ಆಗಿದ್ದ ಮೌಖಿಕ ವಿಭಾಗದಂತೆ ಜಮೀನುಗಳು ಭಾಗವಾಗಿವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯ ಮತ್ತು ಮುಂದುವರೆದ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯ ಅಂಶಗಳಲ್ಲಿ ಸಂಬಂದಗಳ ಹೊರತಾದ ಎಲ್ಲ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 3 ಮತ್ತು 4 ನೇ ಪ್ರತಿವಾದಿಯರು ಗೈರು ಕೂಗಿ ಕರಿಯಿಸಿದರೂ ಬರಲಿಲ್ಲ, ಅವರ ಪರ ವಕೀಲರು ಹಾಜರಿಲ್ಲ, ಅದ್ದರಿಂದ ಈ ಪ್ರತಿವಾದಿಯರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**